# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ** ಪ್ರಶ್ನೆ ಸಂಖ್ಯೆ | : | 768 |
| ಸದಸ್ಯರ ಹೆಸರು | : | ಶ್ರೀಮತಿ ಉಮಾಶ್ರೀ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 12.12.2023 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಮಹಿಳಾ ಸ್ವ-ಸಹಾಯ ಸಂಘಗಳ ಸಬಲೀಕರಣಕ್ಕಾಗಿ ಸಣ್ಣ ಕೈಗಾರಿಕಾ ಇಲಾಖೆಯಿಂದ ಯಾವ ಯಾವ ಯೋಜನೆಗಳನ್ನು ರೂಪಿಸಿದೆ; | ಸಣ್ಣ ಕೈಗಾರಿಕಾ ಇಲಾಖೆಯು ತೆಂಗಿನ ನಾರಿನ ಉತ್ಪನ್ನಗಳನ್ನು ತಯಾರಿಸುವ ಕೈಗಾರಿಕೆಗಳ ಸ್ಥಾಪನೆಗೆ ಸ್ವ-ಸಹಾಯ ಸಂಘವನ್ನು ಮಹಿಳೆಯರು ಸ್ಥಾಪಿಸಿದಲ್ಲಿ ಅವುಗಳ ಯೋಜನಾ ವೆಚ್ಚದ ಮೇಲೆ (ನಿವೇಶನ ಕಟ್ಟಡ, ಯಂತ್ರೋಪಕರಣ ಮತ್ತು ಇತರೆ ಚರಾಸ್ತಿ) ಈ ಕೆಳಗಿನಂತೆ ಸಹಾಯ ಧನವನ್ನು (ಯೋಜನಾ ಅವಧಿ 2020-21 ರಿಂದ 2022-23) ನೀಡಲಾಗುತ್ತಿದೆ:<br><br>• ಸಾಮಾನ್ಯ ವರ್ಗದ ಮಹಿಳಾ ಉದ್ಯಮಶೀಲರು ಸ್ಥಾಪಿಸಿದ ಸ್ವ-ಸಹಾಯ ಸಂಘಗಳಿಗೆ ಶೇ 65% ರಷ್ಟು ಗರಿಷ್ಠ 42.00 ಲಕ್ಷಗಳನ್ನು ಸಹಾಯಧನವಾಗಿ ನೀಡಲಾಗುವುದು.<br>• ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳಾ ಉದ್ಯಮಶೀಲರು ಸ್ಥಾಪಿಸಿದ ಸ್ವ-ಸಹಾಯ ಸಂಘಗಳಿಗೆ ಶೇ 65% ರಷ್ಟು ಗರಿಷ್ಠ 44.00 ಲಕ್ಷಗಳನ್ನು ಸಹಾಯಧನವಾಗಿ ನೀಡಲಾಗುವುದು.<br><br>ಸದರಿ ಯೋಜನೆಯನ್ನು ಮುಂದುವರೆಸುವ ಕುರಿತಾದ ಪ್ರಸ್ತಾವನೆ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.<br><br>**ಉಳಿದಂತೆ ಪುರುಷ / ಮಹಿಳಾ ಉದ್ಯಮಶೀಲರು ಏಕ ಮಾಲೀಕತ್ವ, ಪಾಲುದಾರಿಕೆ, ಪ್ರೈವೇಟ್ ಲಿಮಿಟೆಡ್, ಸಹಕಾರ ಸಂಘ ಅಥವಾ ಇತರೆ ಕಾನೂನಿನ ಅಡಿಯಲ್ಲಿ ಘಟಕಗಳನ್ನು ನೋಂದಾಯಿಸಿ ಕೆಳಕಂಡ ಯೋಜನೆಗಳ ಪ್ರಯೋಜನ ಪಡೆಯಬಹುದಾಗಿದೆ.**<br><br>1. **ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ** ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಉತ್ಪಾದನಾ ಘಟಕಗಳಿಗೆ ಗರಿಷ್ಠ ಸಾಲ ರೂ. 50 ಲಕ್ಷಗಳವರೆಗೆ ಸೇವಾ ಘಟಕಗಳಿಗೆ ರೂ.20 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಯೋಜನಾ ವೆಚ್ಚದ ಮೇಲೆ ಶೇ. 15 ರಿಂದ ಶೇ. 35 ರವರೆಗೆ ಗರಿಷ್ಠ ರೂ.7.50 ಲಕ್ಷದಿಂದ ರೂ.17.50 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ.<br>2. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ಉದ್ಯಮಶೀಲರಿಗೆ ಶೇ 75 ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನಗಳನ್ನು ಮತ್ತು ಕೈಗಾರಿಕಾ ಶೆಡ್‌ಗಳನ್ನು ನೀಡಲಾಗುತ್ತಿದೆ.<br>3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಉದ್ಯಮಶೀಲರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಬ್ಯಾಂಕಿನಿಂದ ಸಾಲ ಒದಗಿಸಿ ಯೋಜನಾ |

| | | |
|---|---|---|
| | | ವೆಚ್ಚದ ಮೇಲೆ ಶೇ 60 ರಷ್ಟು ಗರಿಷ್ಠ ರೂ.5.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.<br><br>4. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ಮೊದಲ ಪೀಳಿಗೆಯ ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುತ್ತಿದೆ.<br><br>5. ಕರ್ನಾಟಕ ರಾಜ್ಯ ಕೈಗಾರಿಕಾ ನೀತಿ 2020-25 ರಂತೆ ಕೆಳಕಾಣಿಸಿದ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಅರ್ಹ ಕೈಗಾರಿಕೆಗಳಿಗೆ ನೀಡಿ ಉತ್ತೇಜಿಸಲಾಗುತ್ತಿದೆ.<br><br>1. ಮುದ್ರಾಂಕ ಶುಲ್ಕ ವಿನಾಯಿತಿ<br>2. ನೋಂದಣಿ ಶುಲ್ಕ ರಿಯಾಯಿತಿ.<br>3. ಬಂಡವಾಳ ಹೂಡಿಕೆ ಸಹಾಯಧನ<br>4. ಕಿರು ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ<br>5. ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>6. ರಫ್ತು ಆಧಾರಿತ ಘಟಕಗಳಿಗೆ ರಿಯಾಯಿತಿ.<br>7. ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ.<br>8. ವಿದ್ಯುತ್ ತೆರಿಗೆ ವಿನಾಯಿತಿ<br>9. ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಪ್ರಮಾಣಪತ್ರ ಸಹಾಯಧನ<br>10. ಮಳೆ ನೀರು ಕೊಯ್ಲು / ಸಂರಕ್ಷಣೆ ಸಹಾಯಧನ<br>11. ತಂತ್ರಜ್ಞಾನ ಉನ್ನತೀಕರಣಕ್ಕೆ ಬಡ್ಡಿ ಸಹಾಯಧನ<br><br>6. **ಮಾರುಕಟ್ಟೆ ಅಭಿವೃದ್ಧಿ ಸಹಾಯಧನ:** ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ ,ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ (ನಿ) ಹಾಗೂ ತೆಂಗಿನ ನಾರಿನ ಪ್ರಾಥಮಿಕ ಸಹಕಾರ ಸಂಘಗಳು ಮತ್ತು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹಿಂದಿನ 3 ವರ್ಷಗಳಲ್ಲಿ ನಡೆಸಿದ ವಹಿವಾಟಿನ ಸರಾಸರಿಯಲ್ಲಿ ಶೇ.10 ರಷ್ಟು ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು ನೀಡಲಾಗುತ್ತಿದೆ.<br><br>7. **ತೆಂಗಿನ ನಾರಿನ ಕುಶಲಕರ್ಮಿಗಳಿಗೆ ಅನುರೂಪ ವೇತನ:** ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ (ನಿ) ಮತ್ತು ಸೂಕ್ಷ್ಮ & ಸಣ್ಣ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತೆಂಗಿನ ನಾರಿನ ಕುಶಲಕರ್ಮಿಗಳಿಗೆ ಪ್ರೋತ್ಸಾಹ ನೀಡಲು ರಾಜ್ಯ ಸರ್ಕಾರದ ವತಿಯಿಂದ ಅನುರೂಪ ವೇತನವನ್ನು ಬಿಡುಗಡೆ ಮಾಡಲಾಗುತ್ತದೆ.<br><br>8. **ಕಲ್ಪವೃಕ್ಷ ಕಾಯಕ ಯೋಜನೆ: (ಯೋಜನಾ ಅವಧಿ 2020-21 ರಿಂದ 2022-23):** ತೆಂಗಿನ ನಾರಿನ ಉತ್ಪಾದನಾ ಘಟಕಗಳಿಗೆ ಪ್ರೋತ್ಸಾಹ ನೀಡಲು ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತದೆ. |
| ಆ) | ಸಣ್ಣ ಕೈಗಾರಿಕಾ ಇಲಾಖೆಯಿಂದ ನಿರ್ಮಿಸಲಾಗುವ ಕೈಗಾರಿಕಾ ವಸಾಹತುಗಳಲ್ಲಿ ನಿವೇಶನಗಳನ್ನು | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ನಿಗಮದಿಂದ ಸ್ಥಾಪಿಸಿರುವ ಕೈಗಾರಿಕಾ ವಸಾಹತುವಿನಲ್ಲಿ ಮಳಿಗೆ/ ನಿವೇಶನಗಳನ್ನು ಕೈಗಾರಿಕಾ ಉತ್ಪನ್ನಗಳನ್ನು ತಯಾರಿಸುವ ಕೈಗಾರಿಕೋದ್ಯಮಿಗಳಿಗೆ ಮಾತ್ರ ಹಂಚಿಕೆ ಮಾಡಲು |

| | | |
|---|---|---|
| ಆ) | ಸಣ್ಣ ಕೈಗಾರಿಕಾ ಇಲಾಖೆಯಿಂದ ನಿರ್ಮಿಸಲಾಗುವ ಕೈಗಾರಿಕಾ ವಸಾಹತುಗಳಲ್ಲಿ ನಿವೇಶನಗಳನ್ನು ಮಹಿಳಾ ಸ್ವ-ಸಹಾಯ ಸಂಘದವರಿಗೆ ಹಂಚಿಕೆ ಮಾಡಲು ಆದ್ಯತೆಯನ್ನು ನೀಡಲಾಗುತ್ತಿದಯೇ; (ವಿವರ ಒದಗಿಸುವುದು) | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ನಿಗಮದಿಂದ ಸ್ಥಾಪಿಸಿರುವ ಕೈಗಾರಿಕಾ ವಸಾಹತುವಿನಲ್ಲಿ ಮಳಿಗೆ/ ನಿವೇಶನಗಳನ್ನು ಕೈಗಾರಿಕಾ ಉತ್ಪನ್ನಗಳನ್ನು ತಯಾರಿಸುವ ಕೈಗಾರಿಕೋದ್ಯಮಿಗಳಿಗೆ ಮಾತ್ರ ಹಂಚಿಕೆ ಮಾಡಲು ಅವಕಾಶವಿರುತ್ತದೆ. ಹಾಲಿ ನಿಯಮಗಳಲ್ಲಿ ಮಹಿಳಾ ಕೈಗಾರಿಕೋದ್ಯಮಿಗಳಿಗೆ ನಿವೇಶನ/ ಮಳಿಗೆ ಹಂಚಿಕೆ ಮಾಡಲು ಮೀಸಲಾತಿ ಕಲ್ಪಿಸಲಾಗಿರುತ್ತದೆ. ಆದರೆ, ಮಹಿಳಾ ಸ್ವ-ಸಹಾಯ ಸಂಘದವರಿಗೆ ಮೀಸಲಾತಿ ಇರುವುದಿಲ್ಲ. ನಿಗಮವು ಹೊರಡಿಸುವ ಪ್ರಕಟಣೆಗೆ ಎದುರಾಗಿ, ಕೈಗಾರಿಕಾ ಉತ್ಪನ್ನಗಳ ತಯಾರಿಕೆಗಾಗಿ ನಿವೇಶನ/ ಮಳಿಗೆ ಹಂಚಿಕೆ ಮಾಡಲು ಸೂಕ್ತ ಪ್ರಸ್ತಾವನೆ ಸಲ್ಲಿಸಿದಲ್ಲಿ, ನಿಯಮಾನುಸಾರ ನೀಡಿ ಹಂಚಿಕೆಗೆ ಕ್ರಮವಹಿಸಲಾಗುವುದು. |
| ಇ) | ಇದುವರೆಗೂ ಬಾಗಲಕೋಟೆ ಜಿಲ್ಲೆಯಲ್ಲಿ ಎಷ್ಟು ಸ್ವ-ಸಹಾಯ ಸಂಘಗಳಿಗೆ ಕೈಗಾರಿಕಾ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಬಾಗಲಕೋಟೆ ಜಿಲ್ಲೆಯಲ್ಲಿನ ಕೈಗಾರಿಕಾ ವಸಾಹತುವಿನಲ್ಲಿ ನೊಂದಾಯಿತ ಮತ್ತು ಕೈಗಾರಿಕಾ ಚಟುವಟಿಕೆ ಕೈಗೊಳ್ಳುವ ಸ್ವ-ಸಹಾಯ ಸಂಘಗಳು ಕೈಗಾರಿಕೆ ಆರಂಭಿಸಲು ಯಾವುದೇ ಮಳಿಗೆ/ ನಿವೇಶನಗಳ ಹಂಚಿಕೆಗೆ ಅರ್ಜಿ ಸಲ್ಲಿಸದೇ ಇರುವುದರಿಂದ ಮಳಿಗೆ/ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ. |

ಸಿಐ 234 ಸಿಎಸ್‌ಸಿ 2023

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ,
ಬೆಂಗಳೂರು –560001. ದೂ. 22034319

106

ಸಂಖ್ಯೆ: ಸಿಐ 62 ಸಿಎಸ್‌ಸಿ 2019 ದಿನಾಂಕ: 13.07.2020.

# ತಿದ್ದುಪಡಿ ಆದೇಶ

ದಿನಾಂಕ: 29.05.2020ರಂದು ಹೊರಡಿಸಲಾಗಿದ್ದ ಸರ್ಕಾರಿ ಆದೇಶ ಸಂಖ್ಯೆ: ಸಿಐ 62 ಸಿಎಸ್‌ಸಿ 2019ರಲ್ಲಿನ ಆದೇಶ ಭಾಗದಲ್ಲಿನ ಕಲ್ಪವೃಕ್ಷಕಾಯಕ ಯೋಜನೆಗಳಿಗೆ ಆಯವ್ಯಯ ವಿವರದ ಕುರಿತಂತೆ ಕೋಷ್ಟಕವನ್ನು ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು, ಉಳಿದಂತೆ ಸದರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಯಥಾವತ್ ಹಾಗೆಯೇ ಇರುತ್ತದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ಉದ್ದಿಮೆಯ ಪ್ರಕಾರ | ಸಹಾಯಧನ ಪ್ರಮಾಣ (ಗರಿಷ್ಠ ಮಿತಿ) | | | | | | ಒಟ್ಟು ಆಯವ್ಯಯ |
|---|---|---|---|---|---|---|---|---|
| | | ಸಾಮಾನ್ಯ | | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಥವಾ ಮಹಿಳೆ | | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಮಹಿಳೆ | | |
| | | % | ಗರಿಷ್ಠ ಮಿತಿ | % | ಗರಿಷ್ಠ ಮಿತಿ | % | ಗರಿಷ್ಠ ಮಿತಿ | |
| 1 | ಸೂಕ್ಷ್ಮ ಘಟಕ (ಸ್ವಸಹಾಯ ಸಂಘ/ ಸಹಕಾರ) | 60 | 20.00 | +5 | 22.00 | +5 | 24.00 | 1500.00 |
| 2 | ಸೂಕ್ಷ್ಮ ಘಟಕ | 50 | 20.00 | +5 | 22.00 | +5 | 24.00 | 1300.00 |
| 3 | ಸಣ್ಣ ಕೈಗಾರಿಕೆ | 40 | 150.00 | +5 | 160.00 | +5 | 170.00 | 3100.00 |
| 4 | ಮಧ್ಯಮ ಕೈಗಾರಿಕೆ | 30 | 250.00 | +5 | 260.00 | +5 | 270.00 | 2300.00 |
| 5 | ಮಧ್ಯಮ ಕೈಗಾರಿಕೆ (Thrust Sector) | 40 | 300.00 | +5 | 315.00 | +5 | 330.00 | 1800.00 |
| ಒಟ್ಟು ಮೊತ್ತ | | | | | | | | 10000.00 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸುಮತಿ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ (ಸಪ್ರಕ್ಕೈ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು–01.
2. ಪ್ರಧಾನ ಮಹಾಲೇಖಪಾಲರು (ಇ & ಆರ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು–01.

3. ಪ್ರಧಾನ ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-01.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲಗಳು), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು-01.
5. ಆಯುಕ್ತರು, ಕೈಗಾರಿಕಾಭಿವೃದ್ಧಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.
6. ನಿರ್ದೇಶಕರು (ಎಂ.ಎಸ್.ಎಂ.ಇ.), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ಎಸ್.ಎಫ್-4 & 5, ಸ್ಟರಲಿಂಗ್ ಟವರ್ (ಗಾರ್ಮೆಂಟ್ ಕಾಂಪ್ಲೆಕ್ಸ್), 6ನೇ ಬ್ಲಾಕ್, ಕೈಗಾರಿಕಾ ವಸಾಹತು, ರಾಜಾಜಿನಗರ ಬೆಂಗಳೂರು-10.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳ ನಿಯಮಿತ, ಜಿಲ್ಲಾ ಕೈಗಾರಿಕಾ ಕೇಂದ್ರದ ಕಟ್ಟಡ 3ನೇ ಮಹಡಿ, 1ನೇ ಅಡ್ಡರಸ್ತೆ, ಕೈಗಾರಿಕಾ ವಸಾಹತು ರಾಜಾಜಿನಗರ, ಬೆಂಗಳೂರು - 10.
9. ಹಿರಿಯ ನಿರ್ದೇಶಕರು (ಪಿಎಫ್‌ಆರ್), ಯೋಜನಾ ಇಲಾಖೆ, ಕೊಠಡಿ ಸಂಖ್ಯೆ 720, 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01.
10. ಮಾನ್ಯ ಮುಖ್ಯಮಂತ್ರಿಯವರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು-01.
11. ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
12. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-1), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು-01.
13. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು-01.
14. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಎಂ.ಎಸ್.ಎಂ.ಇ. & ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು-01.
15. ಸರ್ಕಾರದ ಅಧೀನ ಕಾರ್ಯದರ್ಶಿ (ಜನಸ್ಪಂದನ), ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿ.ವಿ. ಟವರ್, ಚಿಕ್ಕ ಗೋಪುರ, ಬೆಂಗಳೂರು-01.
16. ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು & ಸಮನ್ವಯ), ವಿಕಾಸ ಸೌಧ, ಬೆಂಗಳೂರು-01.
17. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ,
ಬೆಂಗಳೂರು –560001. ದೂ. 22034319

ಸಂಖ್ಯೆ: ಸಿಐ 62 ಸಿಎಸ್ ಸಿ 2019

ದಿನಾಂಕ: 15.02.2021.

## ಪರಿಷ್ಕೃತ ತಿದ್ದುಪಡಿ ಆದೇಶ

ಕೇಂದ್ರ ಸರ್ಕಾರವು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲಿನ ಹೂಡಿಕೆ ಮತ್ತು ವಹಿವಾಟು ಆಧಾರದ ಮೇಲಿನ ಮಿತಿಯನ್ನು ಹೆಚ್ಚಿಸಿ ವರ್ಗೀಕರಿಸಿರುವ ಹಿನ್ನೆಲೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ: ಸಿಐ 62 ಸಿಎಸ್ ಸಿ 2019 & ತಿದ್ದುಪಡಿ ಆದೇಶ ಸಂಖ್ಯೆ: ಸಿಐ 62 ಸಿಎಸ್ ಸಿ 2019, ದಿ: 13.07.2020ರಲ್ಲಿ ಕಲ್ಪವೃಕ್ಷ ಕಾಯಕ ಯೋಜನೆಗಳಿಗೆ ಆಯವ್ಯಯ ವಿವರದ ಕುರಿತಂತೆ ನೀಡಲಾಗಿರುವ ಕೋಷ್ಟಕವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 74 ವೆಚ್ಚ-1/2019, ದಿ: 10.02.2021ರ ಅನುಸಾರ ಮಾರ್ಪಾಟುಗೊಳಿಸಿದ್ದು, ಅದನ್ನು ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು, ಉಳಿದಂತೆ ಸದರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ, ಯಥಾವತ್ ಹಾಗೆಯೇ ಇರುತ್ತದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಉದ್ದಿಮೆಯ ಪ್ರಕಾರ | ಸಹಾಯಧನ ಪ್ರಮಾಣ (ಗರಿಷ್ಟ ಮಿತಿ) | | | | | | ಒಟ್ಟು ಆಯವ್ಯಯ |
|---|---|---|---|---|---|---|---|---|
| | | ಸಾಮಾನ್ಯ | | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಥವಾ ಮಹಿಳೆ | | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಮಹಿಳೆ | | |
| | | % | ಗರಿಷ್ಟ ಮಿತಿ | % | ಗರಿಷ್ಟ ಮಿತಿ | % | ಗರಿಷ್ಟ ಮಿತಿ | |
| 1 | ಸೂಕ್ಷ್ಮ ಘಟಕ (ಸ್ವ ಸಹಾಯ ಸಂಘ/ ಸಹಕಾರಿ ಸಂಘ) | 60 | 40.00 | +5 | 42.00 | +5 | 44.00 | 1100.00 |
| 2 | ಸೂಕ್ಷ್ಮ ಘಟಕ | 50 | 40.00 | +5 | 42.00 | +5 | 44.00 | 1200.00 |
| 3 | ಸಣ್ಣ ಕೈಗಾರಿಕೆ | 40 | 200.00 | +5 | 210.00 | +5 | 220.00 | 2200.00 |
| 4 | ಸಣ್ಣ ಕೈಗಾರಿಕೆ (Thrust Sector) | 45 | 250.00 | +5 | 265.00 | +5 | 280.00 | 2000.00 |
| 5 | ಮಧ್ಯಮ ಕೈಗಾರಿಕೆ | 30 | 300.00 | +5 | 310.00 | +5 | 320.00 | 2000.00 |
| 6 | ಮಧ್ಯಮ ಕೈಗಾರಿಕೆ (Thrust Sector) | 35 | 350.00 | +5 | 365.00 | +5 | 380.00 | 1500.00 |
| ಒಟ್ಟು ಮೊತ್ತ | | | | | | | | 10000.00 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸುಮತಿ ಎಸ್.) 15.02.2021
ಸರ್ಕಾರದ ಅಧೀನ ಕಾರ್ಯದರ್ಶಿ(ಸಪ್ರಕೈ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.

2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ಎ) ಕರ್ನಾಟಕ ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲಗಳು), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು-01.
5. ಆಯುಕ್ತರು, ಕೈಗಾರಿಕಾಭಿವೃದ್ಧಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001.
6. ನಿರ್ದೇಶಕರು (ಎಂಎಸ್.ಎಂ.ಇ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ಎಸ್.ಎಫ್.-4 & 5, ಸ್ವರಲಿಂಗ್ ಟವರ್ (ಗಾರ್ಮೆಂಟ್ ಕಾಂಪ್ಲೆಕ್ಸ್), 6ನೇ ಬ್ಲಾಕ್, ಕೈಗಾರಿಕಾ ವಸಾಹತು, ರಾಜಾಜಿನಗರ ಬೆಂಗಳೂರು-10.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿಯಮಿತ, ಜಿಲ್ಲಾ ಕೈಗಾರಿಕಾ ಕೇಂದ್ರದ ಕಟ್ಟಡ 3ನೇ ಮಹಡಿ, 1ನೇ ಅಡ್ಡರಸ್ತೆ, ಕೈಗಾರಿಕಾ ವಸಾಹತು, ರಾಜಾಜಿನಗರ ಬೆಂಗಳೂರು-10.
9. ಹಿರಿಯ ನಿರ್ದೇಶಕರು (ಪಿಎಫ್ಆರ್), ಯೋಜನಾ ಇಲಾಖೆ, ಕೊಠಡಿ ಸಂಖ್ಯೆ: 270, 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01.
10. ಮಾನ್ಯ ಸಣ್ಣ ಕೈಗಾರಿಕೆ ಮತ್ತು ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು-01.
11. ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು-01.
12. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-1), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು-01.
13. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಎಂ.ಎಸ್.ಎಂ.ಇ. & ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು-01.
14. ಸರ್ಕಾರದ ಅಧೀನ ಕಾರ್ಯದರ್ಶಿ (ಜನಸ್ಪಂದನ), ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಬೆಂಗಳೂರು-01.
15. ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು ಮತ್ತು ಸಮನ್ವಯ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು-01.
16. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತೆಂಗಿನ ನಾರಿನ ಕೈಗಾರಿಕಾ ವಲಯಕ್ಕಾಗಿ ಕಲ್ಪವೃಕ್ಷ ಕಾಯಕ ಯೋಜನೆಗಳಿಗೆ ಅನುಮೋದನೆ ನೀಡುವ ಕುರಿತು

ಓದಲಾಗಿದೆ:
1. ನಿರ್ದೇಶಕರು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ನಿರ್ದೇಶನಾಲಯ ರವರ ಪತ್ರ ಸಂಖ್ಯೆ: ಸೂಸಮಕೈ/ಗ್ರಾಕೈ&ಸ್ವಉಕಾ/ ಅಧೀ/ಕಾನೀತಿ/ /2019-20, ದಿ: 06.07.2019.
2. ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 74 ವೆಚ್ಚ-1/2019, ದಿ: 17.02.2020.
3. ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್ 20 ಪಿಎಫ್ಆರ್ 2019, ದಿ: 23.07.2019.

* * * * *

**ಪ್ರಸ್ತಾವನೆ:**

2019-20ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 284 ರಲ್ಲಿ "ರಾಜ್ಯದಲ್ಲಿ ತೆಂಗಿನ ಉದ್ಯಮ ಸಾಂಪ್ರದಾಯಿಕ ಉದ್ಯಮವಾಗಿದ್ದು, ಹೆಚ್ಚಿನ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದೆ. ರಾಜ್ಯದಲ್ಲಿ ಲಭ್ಯವಿರುವ ಕಚ್ಚಾ ವಸ್ತುವನ್ನು ಉಪಯೋಗಿಸಿಕೊಂಡು ಸಿದ್ಧ ವಸ್ತುಗಳನ್ನುಉತ್ಪಾದಿಸಲು ಹೆಚ್ಚಿನ ಪ್ರೋತ್ಸಾಹ ನೀಡಲು 'ಕಲ್ಪವೃಕ್ಷ ಕಾಯಕ - ಸಮಗ್ರ ತೆಂಗಿನ ನಾರಿನ ನೀತಿ'ಯನ್ನು ಜಾರಿಗೆ ತರಲಾಗುವುದು. ಈ ನೀತಿಯಡಿ ಸ್ವಸಹಾಯ ಸಂಘಗಳು ಅಥವಾ ಖಾಸಗಿ ಘಟಕಗಳು ತೆಂಗಿನ ನಾರಿನ ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸಿದಲ್ಲಿ ಶೇ. 90 ರಷ್ಟು ಅಥವಾ ರೂ. 25.00 ಲಕ್ಷಗಳವರೆಗೆ ಮಿತಿಗೊಳಿಸಿ ಸಹಾಯಧನ ನೀಡಲಾಗುವುದು ಹಾಗೂ ಖಾಸಗಿ ಕೈಗಾರಿಕೆಗಳು ತೆಂಗಿನ ನಾರನ್ನು ಉಪಯೋಗಿಸಿ ಮೌಲ್ಯಾಧಾರಿತ ಉತ್ಪನ್ನಗಳ ಉತ್ಪಾದನೆಯ ಘಟಕವನ್ನು ಸ್ಥಾಪಿಸಿದಲ್ಲಿ ಪ್ರತಿ ಘಟಕಕ್ಕೆ 1 ಕೋಟಿ ರೂ. ಗಳವರೆಗೆ ಸಹಾಯಧನವನ್ನು ನೀಡಲಾಗುವುದು. ರಾಜ್ಯದಲ್ಲಿ ಸಣ್ಣ ಅತೀ ಸಣ್ಣ ತೆಂಗಿನ ನಾರಿನ ಘಟಕಗಳಿಗೆ ಸಾಮಾನ್ಯ ಸೌಲಭ್ಯ ಒದಗಿಸಲು ತೆಂಗಿನ ನಾರಿನ ಕ್ಲಸ್ಟರ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು. ಈ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು 80 ಕೋಟಿ ರೂ. ಒದಗಿಸಿದೆ"ಎಂದು ಘೋಷಿಸಲಾಗಿದೆ.

ಅದರಂತೆ, ಮೇಲೆ ಓದಲಾದ ಕ್ರಮಾಂಕ (1) ರಲ್ಲಿ ಮೇಲಿನ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಕಲ್ಪವೃಕ್ಷ ಕಾಯಕ ನೀತಿ 2019ನ್ನು ರೂಪಿಸಿ ಕರಡು ನೀತಿಯೊಂದಿಗೆ ಸರ್ಕಾರದ ಪರಿಶೀಲನೆ ಹಾಗೂ ಅನುಮೋದನೆಗಾಗಿ ಕರಡು ನೀತಿ ಮತ್ತು ಹೊಸ ಯೋಜನೆಯ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಷರತ್ತು ಮತ್ತು ನಿಬಂಧನೆಗಳೊಂದಿಗೆ ನಿರ್ದೇಶಕರು (ಎಂ.ಎಸ್.ಎಂ.ಇ.) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಿ, ಸದರಿ ಯೋಜನೆಯ ಅನುಷ್ಠಾನ ಮಾಡಲು ಆರ್ಥಿಕ ಇಲಾಖೆ & ಯೋಜನಾ ಇಲಾಖೆಗಳ ಸಹಮತಿ ಕೋರಲಾಗಿತ್ತು.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಗಳು ಈ ಕೆಳಕಂಡಂತೆ ಅಭಿಪ್ರಾಯಿಸಿವೆ:

**ಆರ್ಥಿಕ ಇಲಾಖೆ:**

"The proposal of Administrative Department has been examined. Finance Department agrees to the proposal subject to the following conditions:

A. The incentive proposed for coir clusters from State Government re-examined as a similar policy by Government of India is in force and new units being established in the State may be recommended by AD for incentives under the Central policy.

B. The total quantum of incentives shall be restricted to Rs. 100.00 Crore over a period of three years and as and when this limit is reached no new units shall be approved by AD.

C. Details of units approved and resulting budgetary support required for incentives shall be communicated to FD in regular intervals".

**ಯೋಜನಾ ಇಲಾಖೆ:**

"ಕಲ್ಪವೃಕ್ಷ ಕಾಯಕ ಸಮಗ್ರ ತೆಂಗಿನ ನಾರಿನ ನೀತಿಗೆ ಯೋಜನಾ ಇಲಾಖೆಯು ಸಹಮತಿ ನೀಡಿದೆ."

ಆಯವ್ಯಯ ಭಾಷಣ ಕಂಡಿಕೆ-284ರ ಕುರಿತು ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಗಳು ನೀಡಿರುವ ಅಭಿಪ್ರಾಯದ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಮುಂದಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಐ 62 ಸಿಎಸ್‌ಸಿ 2019, ಬೆಂಗಳೂರು, ದಿನಾಂಕ: 29.05.2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2019-20ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ (284)ರ ಘೋಷಣೆ ಹಿನ್ನೆಲೆಯಲ್ಲಿ 'ಕಲ್ಪವೃಕ್ಷ ಕಾಯಕ ಯೋಜನೆಗಳನ್ನು **ಅನುಬಂಧರಿಂದ (1)ರಿಂದ (3)**ರಲ್ಲಿರಿಸಿರುವಂತೆ ಅನುಷ್ಠಾನಗೊಳಿಸಲು ಮತ್ತು ಮುಂದಿನ 03 ವರ್ಷಗಳ ವರೆಗೆ ಸದರಿ ಯೋಜನೆಗಳಿಗೆ ತಗಲುವ ವೆಚ್ಚವನ್ನು ಕೆಳಗೆ ವಿವರಿಸಿರುವ ಅನುದಾನ ಗರಿಷ್ಠ ರೂ.100.00 ಕೋಟಿ ಮಿತಿಗೊಳಪಟ್ಟು ಲೆಕ್ಕ ಶೀರ್ಷಿಕೆ 2851-00-106-0-12 ರಡಿ ಭರಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

**ಕಲ್ಪವೃಕ್ಷ ಕಾಯಕ ಯೋಜನೆಗಳಿಗೆ ಆಯವ್ಯಯ ವಿವರ:**

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಉದ್ದಿಮೆಯ ಪ್ರಕಾರ | ಸಹಾಯಧನ ಪ್ರಮಾಣ (ಗರಿಷ್ಠಮಿತಿ) | | | | | | ಒಟ್ಟು ಆಯವ್ಯಯ |
|---|---|---|---|---|---|---|---|---|
| | | ಸಾಮಾನ್ಯ | | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಥವಾ ಮಹಿಳೆ | | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಥವಾ ಮಹಿಳೆ | | |
| | | % | ಗರಿಷ್ಟ ಮಿತಿ | % | ಗರಿಷ್ಟ ಮಿತಿ | % | ಗರಿಷ್ಟ ಮಿತಿ | |
| 1 | ಸೂಕ್ಷ್ಮ ಘಟಕ | 60 | 20.00 | +5 | 22.00 | +5 | 24.00 | 1000.00 |

| | | | | | | | | |
|---|---|---|---|---|---|---|---|---|
| 2 | ಸೂಕ್ಷ್ಮ ಘಟಕ (ಸ್ವ ಸಹಾಯ ಸಂಘ/ ಸಹಕಾರಿ) | 50 | 20.00 | +5 | 22.00 | +5 | 24.00 | 1200.00 |
| 3 | ಸಣ್ಣ ಕೈಗಾರಿಕೆ | 40 | 150.00 | +5 | 160.00 | +5 | 170.00 | 2800.00 |
| 4 | ಮಧ್ಯಮ ಕೈಗಾರಿಕೆ | 30 | 250.00 | +5 | 260.00 | +5 | 270.00 | 2000.00 |
| 5 | ಮಧ್ಯಮ ಕೈಗಾರಿಕೆ (Thrust Sector) | 40 | 300.00 | +5 | 315.00 | +5 | 330.00 | 1500.00 |
| 6 | ತೆಂಗಿನ ನಾರಿನ ಕ್ಲಸ್ಟರ್ | 80 | 400.00 | +5 | 425.00 | +5 | 450.00 | 1500.00 |
| ಒಟ್ಟು ಮೊತ್ತ | | | | | | | | 10000.00 |

**ಆಯವ್ಯಯದ ವಿವರ:** **(ರೂ. ಕೋಟಿಗಳಲ್ಲಿ)**

| ವರ್ಷ | ಅನುದಾನ ಹಂಚಿಕೆ |
|---|---|
| 2020-2021 | 25.00 |
| 2021-2022 | 35.00 |
| 2022-2023 | 40.00 |

- ಸದರಿ ಯೋಜನೆಗಳಿಗೆ ಮುಂದಿನ 03 ವರ್ಷಗಳಲ್ಲಿ ಒಟ್ಟು ಆಯವ್ಯಯ ರೂ. 100 ಕೋಟಿ.
- ಸರ್ಕಾರವು ಒಟ್ಟಾರೆ ಆಯವ್ಯಯದೊಳಗೆ ವಿವಿಧ ಯೋಜನೆಗಳಿಗೆ ಅನುದಾನವನ್ನು ಅವಶ್ಯಕತೆಗನುಗುಣವಾಗಿ ಅಂತರ ಬದಲಾವಣೆ ಮಾಡುವುದು.
- 03 ವರ್ಷಗಳ ನಂತರ ರಾಜ್ಯ ಸರ್ಕಾರವು ಯೋಜನೆಗಳ ಅನುಷ್ಠಾನ ಪರಾಮರ್ಶೆ ಮಾಡುವುದು.

ಸದರಿ ಯೋಜನೆಗಳಿಗೆ ಪ್ರತ್ಯೇಕ ಯೋಜನಾ ಮಾರ್ಗಸೂಚಿಗಳನ್ನು ಹೊರಡಿಸಲಾಗುವುದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್ 20 ಪಿಎಫ್ಆರ್ 2019, ದಿ: 23.07.2019 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 74 ವೆಚ್ಚ-1/2019, ದಿ: 17.02.2020. ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸುಮತಿ ಎಸ್.) 29.5.2020
ಸರ್ಕಾರದ ಅಧೀನ ಕಾರ್ಯದರ್ಶಿ (ಸಪುಕೈ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

**ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿ ಕಳುಹಿಸಲಾಗಿದೆ. ತದನಂತರ, ಪ್ರಕಟಗೊಂಡ ಸಂಚಿಕೆಗಳ 25 ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿದೆ.**

ಪ್ರತಿಯನ್ನು:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-56001.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
3. ಪ್ರಧಾನ ಮಹಾಲೇಖಪಾಲರು (ಎ &ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು – 560001.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲಗಳು) ಆರ್ಥಿಕ ಇಲಾಖೆ. ವಿಧಾನ ಸೌಧ, ಬೆಂಗಳೂರು-01.
5. ಆಯುಕ್ತರು, ಕೈಗಾರಿಕಾಭಿವೃದ್ಧಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.
6. ನಿರ್ದೇಶಕರು (ಎಂ.ಎಸ್.ಎಂ.ಇ.), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ಎಸ್. ಎಫ್. - 4 & 5, ಸ್ವರಲಿಂಗ್ ಟವರ್ (ಗಾರ್ಮೆಂಟ್ ಕಾಂಪ್ಲೆಕ್ಸ್), 6ನೇ ಬ್ಲಾಕ್, ಕೈಗಾರಿಕಾ ವಸಹಾತು, ರಾಜಾಜಿನಗರ, ಬೆಂಗಳೂರು-10.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ (ನಿ), ಜಿಲ್ಲಾ ಕೈಗಾರಿಕಾ ಕೇಂದ್ರದ ಕಟ್ಟಡ 3ನೇ ಮಹಡಿ, 1ನೇ ಅಡ್ಡರಸ್ತೆ, ರಾಜಾಜಿನಗರ ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-10.
9. ಹಿರಿಯ ನಿರ್ದೇಶಕರು (ಪಿಎಫ್ಆರ್), ಯೋಜನಾ ಇಲಾಖೆ, ಕೊ.ಸಂ. 720, 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನಸೌಧ, ಬೆಂಗಳೂರು-01.
12. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು-01.
13. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು-01.
14. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಎಂ.ಎಸ್.ಎಂ.ಇ. ಮತ್ತು ಗಣಿ) ವಿಕಾಸಸೌಧ, ಬೆಂಗಳೂರು-01.
15. ಸರ್ಕಾರದ ಅಧೀನ ಕಾರ್ಯದರ್ಶಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಜನಸ್ಪಂದನ), ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಬೆಂಗಳೂರು-01.
16. ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸೇವೆಗಳು ಮತ್ತು ಸಮನ್ವಯ), ವಿಕಾಸ ಸೌಧ, ಬೆಂಗಳೂರು-01.
17. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ANNEXURE-1**

# Kalpavriksha Kayaka Schemes - 2020

## 1 Introduction

The coir fiber production in India during 2016-17 was 5.57 lakh MT. The country exported coir products of value Rs.2,532.28 crore during 2017-18 to the major countries like China (31.95%), USA (21.11%), Netherlands, UK and South Korea etc. The Ministry of MSME, GoI has set a target of achieving domestic sales of coir products to the tune of Rs.40,000 crore and exports of Rs.20,000 crore by 2021-22.

Karnataka is the second highest Indian state in production of coconuts and the potential for production of fiber has been estimated at 3.25 lakh MT per annum. The State also has potential to produce 1.30 lakh MT of yarn and 7.31 lakh MT of coir pith per year. The share of Karnataka is estimated at 28.78% of fiber production in India.

Coir industry is located in the districts of Hassan, Tumakuru, Chikkamagalur, Mandya, Ramanagara, Mysuru, Chamarajnagara, Bengaluru (R), Chitradurga, Dakshina Kannada, Udupi and Uttara Kannada. Coir is primarily a traditional, labour intensive and agro based cottage industry. Majority of coir workers are from rural areas belonging to economically weaker section of the Society. Women constitute about 80 percent of the work force in this industry. The special feature of this industry, is that, women are able to do their household activities even when they are engaged in the coir production

related activities. Thus development of coir industry can contribute immensely for the economic emancipation and empowerment of rural women.

Coir industry need to grow rapidly by leveraging advanced technologies to produce hi-tech products like Geo Textiles, Tuffted Mats, Pith Block, Coir Wood, Grow Bags, Activated Carbon, Bio fuel, Bio-power etc., which have great demand in national and international markets. These products would be treated as "Thrust Products" and are mentioned below:

**List of Thrust Products (Medium & Large):**

1. Geo Textiles
2. Tuffted Mats
3. Coir Wood (composite board)
4. Rubberised coir
5. Activated Carbon
6. Bio fuel (from Coconut shell)
7. Bio-power (from Coconut shell )

In view of the significance of coir industry, it is proposed to implement important schemes mentioned in **Annexure-(1) & (3)**to encourage the coir industry.

*(SUMATHI S.)* 29-05-2020
Under Secretary to Government,
Commerce and Industries Dept.,
Vikasa Soudha, Bangaluru-01.

Annexure-2

## Investment Promotion Subsidy / Capital Subsidy

a) Coir Processing Units set up by SHG and Primary Cooperative Societies

60% of Value of Fixed Assets (VFA) (max. Rs.20.00 lakh)

b) Micro Manufacturing Enterprises

50% of VFA (max. Rs.20.00 lakh)

c) Small Manufacturing Enterprises

40% of VFA (max. Rs.150.00 lakh)

d) Medium Manufacturing Enterprises

30% of VFA (max. Rs.250.00 lakh)

e) Medium Scale Thrust Sector

40% of VFA (max. Rs.300.00 lakh)

Sumathi 29.05.2020
*(SUMATHI S.)*
Under Secretary to Government,
Commerce and Industries Dept.,
Vikasa Soudha, Bangaluru-01.

Annexure-3

## Schemes for Coir industry

1. **Establishment of Micro units by Self Help Group / Cooperative Societies**

1.1 60% of subsidy on value of fixed assets will be given to coir units established by Self Help Groups or Cooperative Societies subject to maximum subsidy of Rs.20 lakhs per unit for general category.

1.2 If the unit is established by SC / ST or women additional 5% subsidy will be allowed with a maximum of Rs.2 lakhs per unit. The SHG or Cooperative Society should have 100% SC / ST or Women Members

1.3 If the unit is established by SC / ST Women additional 5% subsidy will be allowed with a maximum of Rs.2 lakhs per unit. The SHG or Cooperative Society should have 100% SC / ST, Women members under this category the State desires to establish 100 units in a span of 3 years.

2. Establishment of Micro units by Individual Entrepreneurs

2.1 50% of subsidy on value of fixed assets will be given to coir micro enterprises established by individual entrepreneur subject to maximum subsidy of Rs.20 lakhs per unit for general category.

2.2 If the unit is established by SC / ST or women additional 5% subsidy will be allowed with a maximum of Rs.2 lakhs per unit.

2.3 If the unit is established by SC / ST women additional 5% subsidy will be allowed with a maximum of Rs.2 lakhs per unit, under this category the State desires to establish 150 units in a span of 3 years.

**3. Establishment of Small Scale Enterprises**

3.1 40% of subsidy on value of fixed assets will be given to coir small enterprises established by individual entrepreneurs subject to maximum subsidy of Rs.150 lakhs per unit for general category.

3.2 If the unit is established by SC / ST or women additional 5% subsidy will be allowed with a maximum of Rs.10 lakhs per unit.

3.3 If the unit is established by SC / ST women additional 5% subsidy will be allowed with a maximum of Rs. 10 lakhs per unit, under this category the State desires to establish 20 units in a span of 3 years.

**4 Establishment of Medium Scale Enterprises**

4.1 30% of subsidy on value of fixed assets will be given to coir medium enterprises established by individual entrepreneurs subject to maximum subsidy of Rs.250 lakhs per unit for general category.

4.2 If the unit is established by SC / ST or women additional 5% subsidy will be allowed with a maximum of Rs.10 lakhs per unit.

4.3 If the unit is established by SC / ST women additional 5% subsidy will be allowed with a maximum of Rs.10 lakhs per unit, under this category the State desires to establish 10 units in a span of 3 years.

5. Establishment of Medium Thrust Sector Enterprises

5.1 40% of subsidy on value of fixed assets will be given to coir medium thrust sector enterprise established by individual entrepreneurs subject to maximum subsidy of Rs.300 lakhs per unit for general category.

2.3 If the unit is established by SC / ST women additional 5% subsidy will be allowed with a maximum of Rs.2 lakhs per unit, under this category the State desires to establish 150 units in a span of 3 years.

## 3. Establishment of Small Scale Enterprises

3.1 40% of subsidy on value of fixed assets will be given to coir small enterprises established by individual entrepreneurs subject to maximum subsidy of Rs.150 lakhs per unit for general category.

3.2 If the unit is established by SC / ST or women additional 5% subsidy will be allowed with a maximum of Rs.10 lakhs per unit.

3.3 If the unit is established by SC / ST women additional 5% subsidy will be allowed with a maximum of Rs. 10 lakhs per unit, under this category the State desires to establish 20 units in a span of 3 years.

## 4 Establishment of Medium Scale Enterprises

4.1 30% of subsidy on value of fixed assets will be given to coir medium enterprises established by individual entrepreneurs subject to maximum subsidy of Rs.250 lakhs per unit for general category.

4.2 If the unit is established by SC / ST or women additional 5% subsidy will be allowed with a maximum of Rs.10 lakhs per unit.

4.3 If the unit is established by SC / ST women additional 5% subsidy will be allowed with a maximum of Rs.10 lakhs per unit, under this category the State desires to establish 10 units in a span of 3 years.

## 5. Establishment of Medium Thrust Sector Enterprises

5.1 40% of subsidy on value of fixed assets will be given to coir medium thrust sector enterprise established by individual entrepreneurs subject to maximum subsidy of Rs.300 lakhs per unit for general category.

5.2 If the unit is established by SC / ST or women additional 5% subsidy will be allowed with a maximum of Rs.15 lakhs per unit.

5.3 If the unit is established by SC / ST women additional 5% subsidy will be allowed with a maximum of Rs.15 lakhs per unit, under this category the State desires to establish 8 units in a span of 3 years.

6 **Establishment of Common Facility Centre (CFC) by Clusters**

By making use of GoI's SFURTI scheme, more emphasis be given to establish CFC by clusters.

Sumathi S
*(SUMATHI S.)* 29.5.2020
Under Secretary to Government,
Commerce and Industries Dept.,
Vikasa Soudha, Bangaluru-01.